**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

ಸಂ. ಉ.ಕೃ.ನಿ.(ಕೃ.ಯಾಂ.&ಸೂ.ನೀ.)/ಕೃ.ಯಾಂ.RfP/ಎಂಪ್ಯಾನೆಲ್ ಪಟ್ಟಿ-6/ಸುತ್ತೋಲೆ/2019-20/2020-21

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ : 17.12.2020

# ಸುತ್ತೋಲೆ

ವಿಷಯ: ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ರೈತರಿಗೆ ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಕೃಷಿ ಯಂತ್ರೋಪಕರಣ ಹಾಗು ಕೃಷಿ ಸಂಸ್ಕರಣಾ ಘಟಕಗಳನ್ನು ಒದಗಿಸಲು ಸರಬರಾಜುದಾರರ ಅನುಮೋದಿತ ಪಟ್ಟಿ - 6 ಹಾಗೂ ನಿಗಧಿಪಡಿಸಿರುವ ಗರಿಷ್ಠ ಸಹಾಯಧನದ ವಿವರಗಳು.

ಉಲ್ಲೇಖ:
1. ಕೃಷಿ ಆಯುಕ್ತಾಲಯದ ಸುತ್ತೋಲೆ ಸಂ:ಉ.ಕೃ.ನಿ.(ಕೃ.ಯಾಂ.&ಸೂ.ನೀ./ಕೃ.ಯಾಂ.RfP/ ಎಂಪ್ಯಾನೆಲ್ ಪಟ್ಟಿ-1/ಸುತ್ತೋಲೆ/2019-20/2020-21, ದಿ:19-6-2020.
2. ಕೃಷಿ ಆಯುಕ್ತಾಲಯದ ಸುತ್ತೋಲೆ ಸಂ:ಉ.ಕೃ.ನಿ.(ಕೃ.ಯಾಂ.&ಸೂ.ನೀ./ಕೃ.ಯಾಂ.RfP/ ಎಂಪ್ಯಾನೆಲ್ ಪಟ್ಟಿ-2/ಸುತ್ತೋಲೆ/2019-20/2020-21, ದಿ:22-07-2020.
3. ಕೃಷಿ ಆಯುಕ್ತಾಲಯದ ಸುತ್ತೋಲೆ ಸಂ:ಉ.ಕೃ.ನಿ.(ಕೃ.ಯಾಂ.&ಸೂ.ನೀ.)/ಕೃ.ಯಾಂ.RfP/ ಎಂಪ್ಯಾನೆಲ್ ಪಟ್ಟಿ-3/ಸುತ್ತೋಲೆ/2019-20/2020-21, ದಿನಾಂಕ : 11-08-2020.
4. ಕೃಷಿ ಆಯುಕ್ತಾಲಯದ ಸುತ್ತೋಲೆ ಸಂ:ಉ.ಕೃ.ನಿ.(ಕೃ.ಯಾಂ.&ಸೂ.ನೀ.)/ಕೃ.ಯಾಂ.RfP/ ಎಂಪ್ಯಾನೆಲ್ ಪಟ್ಟಿ-4/ಸುತ್ತೋಲೆ/2019-20/2020-21, ದಿನಾಂಕ : 28-09-2020.
5. ಕೃಷಿ ಆಯುಕ್ತಾಲಯದ ಸುತ್ತೋಲೆ ಸಂ:ಉ.ಕೃ.ನಿ.(ಕೃ.ಯಾಂ.&ಸೂ.ನೀ.)/ಕೃ.ಯಾಂ.RfP/ ಎಂಪ್ಯಾನೆಲ್ ಪಟ್ಟಿ-5/ಸುತ್ತೋಲೆ/2019-20/2020-21, ದಿನಾಂಕ : 06-11-2020.
6. ಇಲಾಖಾ Request for Proposal notification No.DDA(FM&MI)/FM RFP/ A3 onwards/2019-20, ದಿ:16-08-2019.
7. ದಿ:03-06-2020, 04-07-2020 & 19-09-2020 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿಸಲಾದ ಅಂಗೀಕಾರ ಪ್ರಾಧಿಕಾರ ಸಮಿತಿ ಸಭಾ ನಡವಳಿಗಳು.
8. ಕೇಂದ್ರ ಸರ್ಕಾರದ 2020-21ನೇ ಸಾಲಿನ SMAM ಪರಿಷ್ಕೃತ ಕಾರ್ಯಾಚರಣೆಯ ಮಾರ್ಗಸೂಚಿಗಳು.

* * * * *

ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ ಸಹಾಯಧನದಡಿ ವಿತರಿಸಲಾಗುವ ಕೃಷಿ ಯಂತ್ರೋಪಕರಣಗಳು ಮತ್ತು ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳ ಸರಬರಾಜುದಾರರ ಪಟ್ಟಿ ಮತ್ತು ನಿಗದಿ ಪಡಿಸಿರುವ ಗರಿಷ್ಠ ಸಹಾಯಧನದ ವಿವರಗಳನ್ನು ಉಲ್ಲೇಖಿತ ಸುತ್ತೋಲೆ (1), (2), (3) ಮತ್ತು (4)ರನ್ವಯ ನೀಡಲಾಗಿರುತ್ತದೆ. ಷೆಡ್ಯೂಲ್ E ನಡಿ ಬರುವ ಕೊಯ್ಲು ಮತ್ತು ಒಕ್ಕಣೆ ಯಂತ್ರಗಳು (Schedule E - Equipments for Harvesting & Threshing) & ಷೆಡ್ಯೂಲ್ F ನಡಿ ಬರುವ ತ್ಯಾಜ ವಸ್ತುಗಳ ನಿರ್ವಹಣಾ ಉಪಕರಣಗಳು (F-Schedule- Equipments for

Residue Management / Special Equipment) ನ ಮೊದಲನೇ ಮತ್ತು ಎರಡನೇ ಹಂತದ ಅನುಮೋದಿತ ಪಟ್ಟಿಯನ್ನು ಉಲ್ಲೇಖಿತ (4) & (5)ರ ಸುತ್ತೋಲೆಯಲ್ಲಿ ನೀಡಲಾಗಿರುತ್ತದೆ. ಸದರಿ E & F schedule ನ ಮೂರನೇ ಹಂತದ ಪಟ್ಟಿಯನ್ನು ಹಾಗೂ ಕೃಷಿ ಯಂತ್ರೋಪಕರಣಗಳು ಮತ್ತು ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳ ಉಳಿಕೆ ತಿದ್ದುಪಡಿ ಪಟ್ಟಿ ಮತ್ತು ನಿಗದಿ ಪಡಿಸಿರುವ ಗರಿಷ್ಠ ಸಹಾಯಧನದ ವಿವರಗಳನ್ನು ಈ ಸುತ್ತೋಲೆಯೊಂದಿಗೆ ಅಡಕಗೊಳಿಸಲಾಗಿರುತ್ತದೆ.

ಸದರಿ ಅನುಮೋದಿಸಿರುವ ಸಂಸ್ಥೆಗಳ ಎಂಪ್ಯಾನೆಲ್ ಅವಧಿಯು ದಿ:**31-03-2022** ರವರೆಗೆ ಜಾರಿಯಲ್ಲಿರುತ್ತದೆ. ಎಂಪ್ಯಾನೆಲ್ ಪಟ್ಟಿಯಲ್ಲಿರುವ ಯಂತ್ರೋಪಕರಣಗಳ ಮಾದರಿಗಳನ್ನು ವಿತರಿಸುವಾಗ, ಈಗಾಗಲೇ ನೀಡಿರುವ ಮಾರ್ಗಸೂಚಿಯನ್ವಯ ಮತ್ತು ಈ ಕೆಳಕಂಡ ಅಂಶಗಳಂತೆ ಕ್ರಮಕೈಗೊಳ್ಳಲು ಸೂಚಿಸಿದೆ.

ವಿವಿಧ ಕೃಷಿ ಯಂತ್ರೋಪಕರಣಗಳ / ಕೃಷಿ ಸಂಸ್ಕರಣಾ ಘಟಕಗಳಿಗೆ ಮಾದರಿವಾರು ರಾಜ್ಯ ಸರ್ಕಾರದ ಆದೇಶದಂತೆ ಗರಿಷ್ಠ ರೂ.1.00 ಲಕ್ಷಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ. 2020-21 ನೇ ಸಾಲಿನ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರ ಪುರಸ್ಕೃತ ಯೋಜನೆಗಳಡಿ ಸಹಾಯಧನ ನೀಡಲು ಅವಕಾಶವಿರುವ ಮಾದರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಡಿ ಭರಿಸುವ ಸಹಾಯಧನವನ್ನು ಪ್ರತ್ಯೇಕವಾಗಿ ನಿಗದಿಗೊಳಿಸಲಾಗಿದೆ. ಅದರಂತೆ, ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿ ಒದಗಿಸಿರುವ ಅನುದಾನವನ್ನು ಖಡ್ಡಾಯವಾಗಿ ಒಗ್ಗೂಡಿಸಿ ಸಹಾಯಧನವನ್ನು ಭರಿಸುವುದು. ಕೃಷಿ ಯಂತ್ರಧಾರೆ ಯೋಜನೆಯಡಿ ನೀಡಿದ ಮಾರ್ಗಸೂಚಿಯಂತೆ ಕೇಂದ್ರ ಪುರಸ್ಕೃತ ಯೋಜನೆಗಳ ಮತ್ತು ರಾಜ್ಯದ ಯೋಜನೆಗಳ ಅನುದಾನವನ್ನು ಒಗ್ಗೂಡಿಸಿ ಸಹಾಯಧನವನ್ನು ಭರಿಸುವುದು.

**ಕೃಷಿ ಸಂಸ್ಕರಣಾ ಘಟಕಗಳಲ್ಲಿ** ಕೇಂದ್ರ ಸರ್ಕಾರದ ಸಂಸ್ಥೆಗಳಿಂದ / ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಸಂಸ್ಥೆಗಳಿಂದ ಪಡೆದ ಪರೀಕ್ಷಾ ವರದಿಗಳ ಮಾದರಿಗಳಿಗೆ ಮಾತ್ರ ಕೇಂದ್ರ ಪುರಸ್ಕೃತ ಯೋಜನೆಗಳಡಿ ಸಹಾಯಧನ ಒದಗಿಸಲು ಅವಕಾಶವಿರುತ್ತದೆ. ಆದರೆ, ಕೃಷಿ ಸಂಸ್ಕರಣಾ ಘಟಕಗಳಿಗೆ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ / ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಸಂಸ್ಥೆಗಳಿಂದ ಪಡೆದ ಪರೀಕ್ಷಾ ವರದಿಗಳ ಮಾದರಿಗಳೊಂದಿಗೆ ಇತರೇ ಸಂಸ್ಥೆಗಳಿಂದ ಪಡೆದ ಪರೀಕ್ಷಾ ವರದಿಗಳ ಮಾದರಿಗಳನ್ನೂ ಸಹ ಸೇರ್ಪಡೆಗೊಳಿಸಲಾಗಿರುತ್ತದೆ. ಆದ್ದರಿಂದ, ಕೇಂದ್ರ ಸರ್ಕಾರದ ಸಂಸ್ಥೆಗಳಿಂದ / **ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ** ಸಂಸ್ಥೆಗಳಿಂದ ಪಡೆದ **ಪರೀಕ್ಷಾ ವರದಿಗಳ ಮಾದರಿಗಳನ್ನು** ಮತ್ತು ಅನುಮೋದಿಸಿದ ದರಗಳನ್ನು **Italics** ಮಾಡಲಾಗಿರುತ್ತದೆ. ಅಂತಹ ಮಾದರಿಗಳಿಗೆ ಮಾತ್ರ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನವನ್ನು ಸಮ್ಮಿಳನಗೊಳಿಸಿ ನಿಗದಿಪಡಿಸಿದ ಒಟ್ಟು ಸಹಾಯಧನವನ್ನು ಭರಿಸುವುದು. ಉಳಿದಂತೆ ಇತರೇ ಮಾದರಿಗಳಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿ ಒಂದೇ ಬಿಲ್ಲಿನಲ್ಲಿ ಸಹಾಯಧನವನ್ನು ಭರಿಸುವುದು.

**ಮುಖ್ಯವಾದ ಸೂಚನೆ:**

1. **ವಿವಿಧ ಕೃಷಿ ಯಂತ್ರೋಪಕರಣಗಳಿಗೆ ಕೇಂದ್ರ ಸರ್ಕಾರವು ನಿಗದಿಪಡಿಸಿದ ಮಾನದಂಡಗಳನ್ನು ಪರಿಶೀಲಿಸಿ ಕೃಷಿ ಇಲಾಖೆಯು ಕೃಷಿ ಯಂತ್ರೋಪಕರಣಗಳ ಸರಬರಾಜುದಾರರನ್ನು ಎಂಪ್ಯಾನಲ್ ಮಾಡಲಾಗುತ್ತಿದೆ. ಮಾದರಿವಾರು ಸರಬರಾಜುದಾರರು ನೀಡಿದ ದರವನ್ನು ದರಕರಾರು ಪಟ್ಟಿಯಲ್ಲಿ ನೀಡಲಾಗಿರುತ್ತದೆ. ಸದರಿ ದರಗಳು ಸೀಲಿಂಗ್/ಗರಿಷ್ಟ (Maximum Indicative Cost) ದರಗಳಾಗಿದ್ದು, ಇಲಾಖೆಯು ನಿಗದಿಪಡಿಸಿದ**

ದರಗಳಾಗಿರುವುದಿಲ್ಲ. ಆದ್ದರಿಂದ ರೈತರು ಸೀಲಿಂಗ್/ಗರಿಷ್ಟ ದರಕ್ಕಿಂತ ಕಡಿಮೆ ದರಕ್ಕೆ ಚೌಕಾಸಿ ಮಾಡಿ ಉಪಕರಣಗಳನ್ನು ಪಡೆಯಬಹುದಾಗಿರುತ್ತದೆ.**

2. ದರ ಪಟ್ಟಿಯಲ್ಲಿ ನೀಡಿರುವ ದರಗಳು ಗರಿಷ್ಠ (Maximum Indicative Cost) ದರಗಳಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ ತೆರಿಗೆಯನ್ನು ಒಳಗೊಂಡಿರುತ್ತವೆ.
3. **ಮಾದರಿವಾರು ಗರಿಷ್ಠ ಮೌಲ್ಯದ ಉಪಕರಣಗಳನ್ನು ದಪ್ಪಾಕ್ಷರಗಳಲ್ಲಿ ನಮೂದಿಸಲಾಗಿದ್ದು, ಸದರಿ ಯಂತ್ರೋಪಕರಣಗಳನ್ನು ಖರೀದಿಸುವ ಸಮಯದಲ್ಲಿ ರೈತರ ಗಮನಕ್ಕೆ ತರಲು ಸೂಕ್ತ ಕ್ರಮಕೈಗೊಳ್ಳುವುದು.**
4. ಪ್ರಸಕ್ತ RfP ಯಲ್ಲಿ ಮೂಲ ಕೃಷಿ ಯಂತ್ರೋಪಕರಣಗಳ ತಯಾರಕರು, ಯಂತ್ರೋಪಕರಣಗಳ ತಯಾರಕರು, ಆಮದುದಾರರು ಮತ್ತು ಯಂತ್ರೋಪಕರಣಗಳ ತಯಾರಕರು / ಆಮದುದಾರರೊಂದಿಗೆ ಒಡಂಬಡಿಕೆ ಮಾಡಿಕೊಂಡ ಸಂಸ್ಥೆಗಳು ಭಾಗವಹಿಸಿ ಅರ್ಹಗೊಂಡಿರುತ್ತಾರೆ. ಇದರಲ್ಲಿ, ಮೂಲ ಕೃಷಿ ಯಂತ್ರೋಪಕರಣಗಳ ತಯಾರಕರು, ಯಂತ್ರೋಪಕರಣಗಳ ತಯಾರಕರು & ಆಮದುದಾರರು, ದೇಶದ ಕಾನೂನಿನ್ವಯ ನೇರವಾಗಿ ರೈತರ ವಂತಿಕೆಯನ್ನು ಪಡೆಯಲು ಅವಕಾಶವಿರದ ಸಂಸ್ಥೆಗಳಿಗೆ Authorized Entity ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ. Authorized Entity ಯು ಎಂಪ್ಯಾನೆಲ್ ಗೊಂಡ ಸಂಬಂಧಿಸಿದ ಸಂಸ್ಥೆಗಳ ಪರವಾಗಿ ರೈತರ ವಂತಿಕೆಯನ್ನು ಸ್ವೀಕರಿಸಲು ಹಾಗೂ ಸವಲತ್ತುಗಳನ್ನು ಸರಬರಾಜು ಮಾಡಿ, ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
5. ಯಂತ್ರೋಪಕರಣಗಳ ತಯಾರಕರು / ಆಮದುದಾರರೊಂದಿಗೆ ಒಡಂಬಡಿಕೆ ಮಾಡಿಕೊಂಡ ಸಂಸ್ಥೆಗಳು ಮತ್ತು Authorized Entity ಗಳು ಪ್ರತಿ ತಿಂಗಳು 10 ನೇ ತಾರೀಖಿನೊಳಗಾಗಿ ಹಿಂದಿನ ತಿಂಗಳಲ್ಲಿ ಸಂಬಂಧಿಸಿದ ತಯಾರಕರು / ಆಮದುದಾರರಿಂದ ಪಡೆದ ಹಾಗೂ ಜಿಲ್ಲಾವಾರು ವಿತರಿಸಿದ ಯಂತ್ರೋಪಕರಣಗಳ ಸಂಖ್ಯೆಯನ್ನು ಕಡ್ಡಾಯವಾಗಿ ಕೇಂದ್ರ ಕಚೇರಿಗೆ ಸಲ್ಲಿಸುವುದು. ಇಲ್ಲದಿದ್ದಲ್ಲಿ, ಅಂತಹ ಸಂಸ್ಥೆಗಳನ್ನು ಕೂಡಲೇ ಎಂಪ್ಯಾನೆಲ್ ಪಟ್ಟಿಯಿಂದ ತೆಗೆದು ಹಾಕಿ, ಸಹಾಯಧನವನ್ನು ತಡೆಹಿಡಿದು ಕಪ್ಪು ಪಟ್ಟಿಗೆ ಸೇರಿಸಲು ಕ್ರಮಕೈಗೊಳ್ಳಲಾಗುವುದು. ನಂತರದ ದಿನಗಳಲ್ಲಿ, mobile app / ಬೇರೆ ತಂತ್ರಾಂಶದ ಮುಖಾಂತರ ವರದಿ ನೀಡಲು ಅವಕಾಶ ಮಾಡಿಕೊಡಲಾಗುವುದು.
6. ಯಂತ್ರೋಪಕರಣಗಳ ತಯಾರಕರು / ಆಮದುದಾರರೊಂದಿಗೆ ಒಡಂಬಡಿಕೆ ಮಾಡಿಕೊಂಡ ಸಂಸ್ಥೆಗಳ ಮುಂದೆ ಮೂಲ ಉಪಕರಣಗಳ ತಯಾರಕರನ್ನು ಮತ್ತು Authorized Entity ಗಳನ್ನು ನೇಮಿಸಿಕೊಂಡ ಸಂಸ್ಥೆಗಳ ಮುಂದೆ Authorized Entity ಗಳ ಹೆಸರನ್ನು ಕಂಸಗಳಲ್ಲಿ ( ) ಒದಗಿಸಲಾಗಿರುತ್ತದೆ.
7. ಸದರಿ ಪಟ್ಟಿಯಲ್ಲಿ ಅರ್ಹಗೊಂಡ ಸಂಸ್ಥೆಗಳು ತಮ್ಮ ಮೂಲ ವಿಳಾಸದ ಮುಖ್ಯ ಕಚೇರಿಯಿಂದಲೂ ಅಥವಾ GST ನಂಬರ್ ಹೊಂದಿರುವ ತಮ್ಮ ಶಾಖಾ ಕಚೇರಿಗಳಿಂದ ಸಹ ಸಹಾಯಧನ ಬಿಲ್ಲುಗಳನ್ನು ಮತ್ತು ಯಂತ್ರೋಪಕರಣಗಳನ್ನು ಸರಬರಾಜು ಮಾಡಬಹುದಾಗಿರುತ್ತದೆ.
8. ಅರ್ಹಗೊಂಡ ಸಂಸ್ಥೆಗಳ ವಿಳಾಸ, ಸಂಪರ್ಕಿಸಬೇಕಾದ ವ್ಯಕ್ತಿಯ ಹೆಸರು, ಮೊಬೈಲ್ ಸಂಖ್ಯೆ, ಸಂಸ್ಥೆಯ ಇ-ಮೇಲ್ ಐಡಿ, Authorized Entity ಯ ಹೆಸರು PAN ನಂಬರ್, GST ನಂಬರ್, ಶಾಖಾ ಕಚೇರಿಗಳ ವಿಳಾಸ ಮತ್ತು ಬ್ಯಾಂಕ್ ಖಾತೆಯ ವಿವರಗಳನ್ನು ಉಲ್ಲೇಖಿತ (3), (4) ಮತ್ತು (5) ರ ಸುತ್ತೋಲೆಗಳಲ್ಲಿ ನೀಡಲಾಗಿರುತ್ತದೆ. ಸದರಿ ವಿವರಗಳಲ್ಲಿನ ಬದಲಾವಣೆಯನ್ನು ಈ ಸುತ್ತೋಲೆಯೊಂದಿಗೆ ನೀಡಲಾಗಿದೆ.
9. **ಪ್ರತಿಯೊಂದು ಅರ್ಹಗೊಂಡ ಸಂಸ್ಥೆಗಳಿಗೆ ಮೇಲಿನ ಕಲಂ (8) ರನ್ವಯ ನೀಡಲಾಗಿರುವ ಬ್ಯಾಂಕ್ ಖಾತೆಗೆ ಲಿಂಕ್‌ಯಗಿರುವಂತೆ ಒಂದು Recipient ID ಮಾತ್ರ ಇರುವಂತೆ ನೋಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ, ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು ಹಾಗೂ ಇನ್ನೊಂದು Recipient ID ರಚಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುವುದು.**
10. ಅರ್ಹಗೊಂಡ ಸಂಸ್ಥೆಗಳು ತಮ್ಮ ಯಂತ್ರೋಪಕರಣಗಳ ತಯಾರಿಕೆಗೆ ಸಂಬಂಧಪಟ್ಟಂತೆ ಒಂದು ವರ್ಷದ Warranty ಅನ್ನು ನೀಡುವುದು ಮತ್ತು ಸಂಬಂಧಿಸಿದ ಯಂತ್ರೋಪಕರಣಗಳಿಗೆ ಬಿಡಿಭಾಗಗಳನ್ನು ಖಡ್ಡಾಯವಾಗಿ 4 ವರ್ಷಗಳ ಕಾಲ ಜಿಲ್ಲಾಮಟ್ಟದಲ್ಲಿ ಪೂರೈಸುವುದು.

11. ಸರಬರಾಜುದಾರರು ಉಪಕರಣಗಳನ್ನು ಸರಬರಾಜು ಮಾಡುವಾಗ ಪ್ರತಿ ಉಪಕರಣದ ಮೇಲೆ **"2020-21 ನೇ ಸಾಲಿನಲ್ಲಿ ಕೃಷಿ ಇಲಾಖಾ ಸಹಾಯಧನ ಪಡೆಯಲಾಗಿದೆ"** ಎಂದು ಮುದ್ರಿಸಿರುವುದನ್ನು ಮತ್ತು ಸಂಬಂಧಿಸಿದ ಸಂಸ್ಥೆಗಳ ಹೆಸರು, ಬ್ರಾಂಡ್, ಯೂನಿಕ್ ಕೋಡ್ ಹಾಗೂ Specification ಅಂಶಗಳನ್ನು ಸವಲತ್ತಿನ ಮೇಲೆ emboss / ವಿವರಗಳುಳ್ಳ ಪ್ಲೇಟ್ಗಳನ್ನು ರಿವೀಟ್ ಮಾಡಿರುವುದನ್ನು ಖಾತರಿಪಡಿಸಿಕೊಂಡು ತದನಂತರ ಸರಬರಾಜು ಮಾಡುವುದು. ಈ ಕೆಳಕಂಡ ವಿವರಗಳೊಂದಿಗೆ ಕಡ್ಡಾಯವಾಗಿ ಸಂಸ್ಥೆಯವರು ಮುದ್ರಿಸುವಂತೆ ನೋಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಪರಿಶೀಲಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.
    - ಉಪಕರಣದ ಮಾದರಿ ಮೇಲೆ ರಿವೀಟ್ ಅಥವಾ ಎಂಬೋಸ್ ಮಾಡುವ ಮಾಹಿತಿ:
        - ಸಂಬಂಧಿಸಿದ ಸಂಸ್ಥೆಯ ಹೆಸರು
        - ಸುತ್ತೋಲೆ (3) ಮತ್ತು (4) ರನ್ವಯ ಇಲಾಖೆಯ ವತಿಯಿಂದ ನೀಡಲಾದ ಯೂನಿಕ್ ಕೋಡ್.
        - ಬ್ರಾಂಡ್, ತೂಕ ಹಾಗೂ ಇತರೆ ಅಂಶಗಳುಳ್ಳ ಮಾಹಿತಿ.
    - ಇಂಜಿನ್ / ಮೋಟಾರ್ ಚಾಲಿತ ಕೃಷಿ ಯಂತ್ರೋಪಕರಣ / ಕೃಷಿ ಸಂಸ್ಕರಣಾ ಘಟಕಗಳನ್ನು, ಇಂಜಿನ್ / ಮೋಟಾರ್ ನ್ನು ಮತ್ತು ಘಟಕಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವ ಸಂದರ್ಭಗಳಲ್ಲಿ, ಇಂಜಿನ್ / ಮೋಟಾರ್ ಮೇಲೆ ಕಡ್ಡಾಯವಾಗಿ **ISI** ಗುರುತು ಹೊಂದಿರಬೇಕು.
12. ಸಂಸ್ಥೆಗಳು RfP ಯಲ್ಲಿ ಭಾಗವಹಿಸಿದಂತೆ, K-Kisan ನಲ್ಲಿ ಸೃಜಿಸಲಾಗಿರುವ ಸಂಸ್ಥೆವಾರು ನೀಡಿದ ID ಸಂಖ್ಯೆಗಳನ್ನು ಯುನಿಕ್ ಕೋಡ್ ನೀಡಲು ಬಳಸಿಕೊಳ್ಳಲಾಗಿರುತ್ತದೆ. ಸದರಿ ಯುನಿಕ್ ಕೋಡ್ ಅನ್ನು ಎಂಪ್ಯಾನೆಲ್ ಬಿಡ್ಡುದಾರರು ಸಹಾಯಧನ ಯೋಜನೆಯಡಿಯಲ್ಲಿ ವಿತರಿಸಲಾಗುವ ಎಲ್ಲಾ ಯಂತ್ರೋಪಕರಣಗಳ ಮೇಲೆ ಕಡ್ಡಾಯವಾಗಿ Emboss / Print ಮಾಡುವುದು.
13. ಪ್ರಸ್ತುತ ಅನುಮೋದಿತ ಪಟ್ಟಿಯನ್ನು ಕಿ-ಕಿಸಾನ್ ಅಲ್ಲಿ **RC-2 ಎಂದು ಅಪ್ಲೋಡ್ ಮಾಡಲಾಗಿರುತ್ತದೆ.**
14. ಕೇಂದ್ರ ಪುರಸ್ಕೃತ ಯೋಜನೆಯಡಿ ಭರಿಸಬೇಕಾದ ಉಪಕರಣವಾರು ಸಹಾಯಧನದ ವಿವರಗಳ ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ (7)ರ SMAM ಯೋಜನೆಯ 2020-21ನೇ ಸಾಲಿನ ಪರಿಷ್ಕೃತ ಕಾರ್ಯಾಚರಣೆಯ ಮಾರ್ಗಸೂಚಿಗಳನ್ನು ಪರಿಗಣಿಸಲು ಈ ಮೂಲಕ ಸೂಚಿಸಿದೆ.
15. ಡೀಸೆಲ್ ಪಂಪ್ ಸೆಟ್ ನೊಂದಿಗೆ **Suction pipe 6 mt, 2 nipples, delivery pipe 3 mt, 3 hose clamps etc.,** ಅನ್ನು ಎಂಪ್ಯಾನೆಲ್ ಬಿಡ್ಡುದಾರರು ಕಡ್ಡಾಯವಾಗಿ ನೀಡುವುದು. **Petrol Engine Pumpset ಗಳಿಗೆ IS 7347:1974, ಡೀಸೆಲ್ ಇಂಜಿನ್ ಗೆ IS 11170:1985, ಪಂಪ್ ಗೆ IS 6595:2002 Part-1 ಮತ್ತು Mono block Pumpset ಗಳಿಗೆ IS 11501:1986 BIS** ಗುರುತುಗಳಿರುವಂತೆ ಕಡ್ಡಾಯವಾಗಿ ಪರಿಶೀಲಿಸುವುದು.
16. ಎಂಪ್ಯಾನಲ್ಡ್ ಸರಬರಾಜುದಾರರು ಒಕ್ಕಣೆ ಯಂತ್ರ / ಬಹು ಬೆಳೆ ಒಕ್ಕಣೆ ಯಂತ್ರದೊಂದಿಗೆ ರೈತರ ಅವಶ್ಯಕತೆಗೆಗಣುಗುಣವಾಗಿ ಕಡ್ಡಾಯವಾಗಿ ಎರಡು ಜರಡಿಗಳನ್ನು (2 sieves) ಮತ್ತು ಕನಿಷ್ಠ ಒಂದು blower/ aspirator ಅನ್ನು ನೀಡುವುದು.
17. **ಕ್ಷೇತ್ರ ಮಟ್ಟದಲ್ಲಿ ವಿವಿಧ ಕೃಷಿ ಯಂತ್ರೋಪಕರಣಗಳ ಮಾದರಿಗಳ ವೈಶಿಷ್ಟ್ಯ ಮತ್ತು ಮಾನದಂಡಗಳಿಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಂಬಂಧಿಸಿದ ಸಂಸ್ಥೆಗಳು, ಸದರಿ ಮಾದರಿಯ ಪರಿಕ್ಷಾ ವರದಿಯ ಪ್ರತಿಯನ್ನು ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಒದಗಿಸುವುದು.**

19/12

**ಕೃಷಿ ಆಯುಕ್ತರು**

ಸುತ್ತೋಲೆಯ ಪ್ರತಿಯನ್ನು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗಾಗಿ ಆದರಪೂರ್ವಕವಾಗಿ ಸಲ್ಲಿಸಿದೆ.
2. ಕೃಷಿ ನಿರ್ದೇಶಕರು ಇವರ ಮಾಹಿತಿಗಾಗಿ ಕಳುಹಿಸಿದೆ.

3. ಅಪರ ಕೃಷಿ ನಿರ್ದೇಶಕರು (ಮಾನವ ಸಂಪನ್ಮೂಲ ಅಭಿವೃದ್ಧಿ / ಬೆಳೆ ಅಭಿವೃದ್ಧಿ & ಯೋಜನೆ / ಸಾವಯವ ಕೃಷಿ) ಇವರ ಮಾಹಿತಿಗಾಗಿ ಕಳುಹಿಸಿದೆ.
4. ಮುಖ್ಯ ಲೆಕ್ಕಾಧಿಕಾರಿಗಳು & ಕಾನೂನು ಅಧಿಕಾರಿಗಳು, ಕೇಂದ್ರ ಕಛೇರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ದರ ಕರಾರು ಪಟ್ಟಿಯೊಂದಿಗೆ,

1. ಜಂಟಿ ಕೃಷಿ ನಿರ್ದೇಶಕರು (ವಿಸ್ತರಣಾ, ತರಬೇತಿ ಮತ್ತು ಇ-ಆಡಳಿತ) ರವರಿಗೆ ಕಳುಹಿಸುತ್ತಾ, ಸದರಿ ಎಂಪ್ಯಾನಲ್ ಪಟ್ಟಿಯನ್ನು ಕೆ-ಕಿಸಾನ್ ಪೋರ್ಟಲ್‌ನಲ್ಲಿ ಅಳವಡಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.
2. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ / ಎಲ್ಲಾ ಉಪ ಕೃಷಿ ನಿರ್ದೇಶಕರು, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳಿಗೆ (ಜಂಟಿ ಕೃಷಿ ನಿರ್ದೇಶಕರುಗಳ ಮೂಲಕ) ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. **ಸದರಿ ದರ ಕರಾರು ಪಟ್ಟಿಯಲ್ಲಿ ಪ್ರಪ್ರಥಮವಾಗಿ ಸೇರ್ಪಡೆಯಾಗಿರುವ ಸಂಸ್ಥೆಗಳು ದಿನಾಂಕ *ದಿನಾಂಕ:15-01-2021* ರೊಳಗೆ** RfP ಷರತ್ತುಗಳನ್ವಯ ನಿಗದಿತ ಮೊತ್ತಕ್ಕೆ (ಷೆಡ್ಯೂಲ್ ವಾರು) ***ಬ್ಯಾಂಕ್ ಗ್ಯಾರಂಟಿಯನ್ನು (in favour of Director of Agriculture, Department of Agriculture)*** ಇಲಾಖೆಗೆ ಸಲ್ಲಿಸುವ ಹಾಗೂ ಇಲಾಖೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಅನುಮೋದಿಸಲಾಗಿರುತ್ತದೆ (ಬ್ಯಾಂಕ್ ಗ್ಯಾರಂಟಿ ಮೊತ್ತದ ವಿವರ ಹಾಗೂ ಒಡಂಬಡಿಕೆ ನಮೂನೆಯನ್ನು ಲಗತ್ತಿಸಿದೆ). ಒಂದು ವೇಳೆ ಎಂಪ್ಯಾನಲ್ಡ್ ಆದ ಸಂಸ್ಥೆಗಳು ***ದಿನಾಂಕ:01-01-2021 ರೊಳಗೆ*** ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸದೇ, ಇಲಾಖೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳದಿದ್ದಲ್ಲಿ, ಅಂತಹ ಸಂಸ್ಥೆಗಳನ್ನು ಎಂಪ್ಯಾನೆಲ್ಡ್ ಪಟ್ಟಿ ಹಾಗೂ ಕೆ-ಕಿಸಾನ್ ಪೋರ್ಟಲ್ ನಿಂದ ತೆಗೆದು ಹಾಕಿ ಇ.ಎಂ.ಡಿ. ಮೊತ್ತವನ್ನು ಹಾಗೂ ಬಾಕಿಯಿರುವ ಸಹಾಯಧನವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. ಮುಂದುವರೆದು, ಎಲ್ಲಾ ಎಂಪ್ಯಾನೆಲ್ಡ್ ಸಂಸ್ಥೆಗಳು, ಸಂಸ್ಥೆವಾರು ನೀಡಿದ K2 Recepient ID (ಪ್ರತಿ ಸಂಸ್ಥೆಗೆ ಒಂದರಂತೆ ಮಾತ್ರ) ಅನ್ನು ದಿನಾಂಕ: 15-12-2020 ರೊಳಗೆ Declare ಮಾಡುವುದು (Annexure-II). ಸದರಿ ಮಾಹಿತಿಯನ್ನು ಇಲಾಖೆಯು ಕೆ-ಕಿಸಾನ್ ಆನ್ ಲೈನ್ ಪೋರ್ಟಲ್ ನಲ್ಲಿ ಅಪ್ಲೋಡ್ ಮಾಡಲು ಕ್ರಮಕೈಗೊಳ್ಳುವುದು. ಒಂದುವೇಳೆ K2 Recepient ID ಯನ್ನು ಬಿಡ್ಡುದಾರರು ತಪ್ಪಾಗಿ ನೀಡಿದ್ದರೆ ಸಂಬಂಧಿಸಿದ ಬಿಡ್ಡುದಾರರು ಇದಕ್ಕೆ ಜವಾಬ್ದಾರರಾಗಿರುತ್ತಾರೆ.

## Firm-wise, Model-wise Ceiling Rates & Subsidy Sharing Pattern

(All prices inclusive of applicable taxes)

### Schedule E - Equipments for Harvesting & Threshing

**E(1).Engine operated/tractor operated Thresher/Multi Crop Thresher:**

| Sl. No | Name of the Bidder | E(1)3 - Tractor operated Thresher/Multi Crop Thresher | |
|---|---|---|---|
| | | Make /Model | Empanele d (Ceiling) Rates |
| 1. | M/s. Kaka Trading Company (30) | Kamdhenu Cutter Model (HADAMBA) | 315,000 |
| 2. | M/s. Saptagiri Enterprises ( 59) | TH 25 (717*595) | 275,968 |
| 3. | M/s. Sri Sangmeshwara Agro Agency (112) | Annapurna AHC/035/MC/350 | 275,000 |
| 4. | M/s. Valasumani Farm Machines Private Limited(52) | VMT 5539 | 298,000 |
| 5. | | VMT 5537 G | 285,000 |
| 6. | M/s. Saptagiri Enterprises ( 59) | Ganesh Raj Thresher | 379,456 |
| 7. | M/s. Shristhi Enterprises (79) | Ganga Cutter Model | 350,000 |
| 8. | M/s. Sonalika Agro Industries Corporation(14) | HOPPER MODEL | 275,000 |
| **L1 Price** | | | **160,000** |
| General Subsidy @ 50% | **Total Subsidy** | | **80,000** |
| | SMAM / CSS Share | | 64,000 |
| | State Share | | 16,000 |
| SCP / TSP Subsidy @ 90% | **Total Subsidy** | | **100,000** |
| | SMAM / CSS Share | | 80,000 |
| | State Share | | 20,000 |

**E(5) - Groundnut Pod Stripper/ Thresher:**

| Sl. No. | Name of the Bidder | E(5)1 – Tractor operated Groundnut Pod Stripper/ Thresher of approx 720mmX 800mm drum size | |
|---|---|---|---|
| | | Make / Model | Empld (Ceiling) Rates |
| 1. | M/s. Kabadi Sales Agencies(46) | Gautam Thresher GN-01 | 231,800 |
| 2. | M/s. Sapthagiri Enterpries (59) (Ganesh Agro Equipments) | TH30G 991X602 | 274,008 |
| **L1 Price** | | | **188,000** |
| General Subsidy @ 50% | **Total Subsidy** | | **94,000** |
| | SMAM / CSS Share | | 75,200 |
| | State Share | | 18,800 |
| SCP / TSP Subsidy @ 90% | **Total Subsidy** | | **100,000** |
| | SMAM / CSS Share | | 94,000 |
| | State Share | | 6,000 |

**E(11) - Maize Sheller:**

| Sl. No. | Name of the Bidder | E(11) 8 - 25-35 HP Tractor Operated Maize Sheller with De Husker | |
|---|---|---|---|
| | | Make / Model | Empld (Ceiling) Rates |
| 1. | M/s. Green India Equipments Pvt. Ltd., (70) | Green India Green 245 | 282,000 |
| **L1 Price** | | | **158,000** |
| General Subsidy @ 50% | | **Total Subsidy** | **79,000** |
| | | SMAM / CSS Share | 30,000 |
| | | State Share | 49,000 |
| SCP / TSP Subsidy @ 90% | | **Total Subsidy** | **100,000** |
| | | SMAM / CSS Share | 40,000 |
| | | State Share | 60,000 |

**Director of Agriculture**

## F-Schedule- Equipments for Residue Management / Special Equipment

### Tractor / Engine operated Trash Cutter / Mulcher / Shredder

| Sl. No. | Name of the Bidder | F(2) - Tractor operated Single Row Mobile Shredder | |
|---|---|---|---|
| | | Make / Model | Empld (Ceiling) Rates |
| 1. | M/s. CLAAS Agricultural Machinery Pvt. Ltd., (73) | CLAAS JAGUAR-25 | 485,000 |
| **L1 Price** | | | **177,851** |
| General Subsidy @ 50% | | **Total Subsidy** | **88,926** |
| | | SMAM / CSS Share | 71,140 |
| | | State Share | 17,785 |
| SCP / TSP Subsidy @ 90% | | **Total Subsidy** | **100,000** |
| | | SMAM / CSS Share | 88,926 |
| | | State Share | 11,075 |

### F(6) – Motor operated chaff cutter with safety cover

| Sl. No. | Name of the Bidder | F(6)1N-<3HP Motor Operated | |
|---|---|---|---|
| | | Make / Model | Empld (Ceiling) Rates |
| 1. | M/s. Sri Sai Agritech (24) | Agricare 3D(3 in 1) | 48,500 |
| 2. | M/s. Shiva Sagar Enterprises (76) (Make- Darshan Singh & Co.) | Samrat | 40,000 |
| 3. | M/s. Pratham Sales Corporation (92) (Make- Chaturbhuja Agro Farm) | DOC 07 (Chacha Brand) | 31,500 |
| 4. | M/s. Farm Agro-Tech Mechinery (107) | SLE 2 hp | 31,300 |
| 5. | M/s. Varsha Agri Business Centre For Development Limited (41) | Classic | 36,000 |
| 6. | M/s. Krishi Vikas Enterprises (25) | OM-6 (XLO) | 33,200 |
| 7. | M/s. Swami Agro Implements (99) | 2 hp | 38,080 |
| 8. | M/s. Ganga Agro Engineering Enterprises (89) (Make- Dhiraj Industries) | Dhiraj | 32,000 |
| **L1 Price** | | | **24,000** |
| General Subsidy @ 50% | | **Total Subsidy** | **12,000** |
| | | SMAM / CSS Share | 9,600 |
| | | State Share | 2,400 |
| SCP / TSP Subsidy @ 90% | | **Total Subsidy** | **21,600** |
| | | SMAM / CSS Share | 12,000 |
| | | State Share | 9,600 |

**F(6) – Motor operated chaff cutter with safety cover**

| Sl. No. | Name of the Bidder | F(6)3-3HP Motor Operated | |
|---|---|---|---|
| | | Make / Model | Empld (Ceiling) Rates |
| 1. | M/s. Sri Raghavendra Enteprises (11) | Om Piyu 3HP | 52,000 |
| 2. | M/s. Sri Ranganatha Agri House (12) | Patsons Engineering Industries | 46,500 |
| 3. | M/s. Rocket Engineering Corporation Private Ltd., (39) | Comet KRC-04 | 52,000 |
| 4. | M/s. Krimpon Machine Tools Pvt. Ltd., (101) | KP-FGC-2 in 1 | 49,500 |
| 5. | M/s. Veeresh Enterprises (106) | CHFF-01 | 42,000 |
| 6. | M/s. Patil Agro Impliments (96) | MSIR Chaff Cutter | 68,800 |
| **L1 Price** | | | **32,000** |
| General Subsidy @ 50% | | **Total Subsidy** | **16,000** |
| | | SMAM / CSS Share | 12,800 |
| | | State Share | 3,200 |
| SCP / TSP Subsidy @ 90% | | **Total Subsidy** | **28,800** |
| | | SMAM / CSS Share | 16,000 |
| | | State Share | 12,800 |

**F(6)5-20HP Tractor operated chaff cutter with safety cover:**

| Sl. No. | Name of the Bidder | Make / Model | Empaneled (Ceiling) Rates |
|---|---|---|---|
| 1. | M/s. Star Associated Industries (22) | Indra Chaff cutter 2018 | 134,000 |
| 2. | M/s. Siddeshwara Enterprises (72) | S Kumar | 143,500 |
| 3. | M/s. Shiva Sagar Enterprises (76) | Kisan Com DSC / TD 5000 | 150,000 |
| 4. | M/s. Pratham Sales Corporation (92) | TOC 06 | 125,000 |
| 5. | M/s. Prakash Engineering & Co., Shimoga (56) | Akash TRCC | 132,800 |
| 6. | M/s. Yusuf Khan Engineering Works (114) | New Vikas Krishi Yantra | 130,000 |
| 7. | M/s. Veeresh Enterprises (106) | Jai Hind-Bharat CHFF-02 | 130,000 |
| **L1 Price** | | | **94,000** |
| General Subsidy @ 50% | | **Total Subsidy** | **47,000** |
| | | SMAM / CSS Share | 22,000 |
| | | State Share | 25,000 |
| SCP / TSP Subsidy @ 90% | | **Total Subsidy** | **84,600** |
| | | SMAM / CSS Share | 28,000 |
| | | State Share | 56,600 |

## F(8)- Tractor operated Plastic Mulch Laying Machine

| Sl. No. | Name of the Bidder | F(8)1: 35 HP and above Tractor Operated Rake | |
|---|---|---|---|
| | | Make / Model | Empaneled (Ceiling) Rates |
| 1. | M/s. Shivalingeswar Enterprises (78) (Make - Shaktiman Agricultural Industries) | SRHR-3.5 / 9 | 335,000 |
| | L1 Price | | **170,000** |
| General Subsidy @ 50% | | **Total Subsidy** | **85,000** |
| | | SMAM / CSS Share | 68,000 |
| | | State Share | 17,000 |
| SCP / TSP Subsidy @ 90% | | **Total Subsidy** | **100,000** |
| | | SMAM / CSS Share | 85,000 |
| | | State Share | 15,000 |

G(5) : Electric Motor operated Ragi Cleaning Machine (Destoner)

| Sl. No. | Name of the Bidder | G5-2 - 3 HP (Output capacity 5.0 q/hour) | |
|---|---|---|---|
| | | Make /Model | Empnld Rates |
| 1. | M/s. Ganga Agro Engineering Enterprises (Make-SMS Engineering Works) | SMS-RD | **121,000** |
| | L1 Price | | **90,000** |
| General Subsidy @ 50% | | **Total Subsidy** | **45,000** |
| | | SMAM/ CSS Share for Italicised Models only | 45,000 |
| | | State Share | - |
| SCP / TSP Subsidy @ 90% | | **Total Subsidy** | **81,000** |
| | | SMAM/ CSS Share for Italicised Models only | 54,000 |
| | | State Share | 27,000 |

G(9)- Electric Motor operated Pulverizer

| Sl. No. | Name of the Bidder | G(9)4(b): 7.5 HP (MS) with arms (hammers) & body made of case hardened steel, 4 nos MS sieves, suitable for grinding all cereals into flour, cast iron body | |
|---|---|---|---|
| | | Make /Model | Empnld Rates |
| 1. | M/s. Ganga Agro Engineering Enterprises (40) (Make-SMS Engineering Works) | SMS-PSH 7.5 | 80,500 |
| | L1 Price | | **48,300** |
| General Subsidy @ 50% | | **Total Subsidy** | **24,150** |
| | | SMAM/ CSS Share for Italicized Models only | 24,150 |
| | | State Share | - |
| SCP / TSP Subsidy @ 90% | | **Total Subsidy** | **43,470** |
| | | SMAM/ CSS Share for Italicized Models only | 28,980 |
| | | State Share | 14,490 |

**Director of Agriculture**

## Addendum 4 to Empanelled List 2, Empanelled List 3, Empanelled List 4& Empanelled List 5

| Sl. No. | Farm Machinery | Schedule | Name of the Bidder | Make/ Model | Empanelled (ceiling rates) | Revised empanelled (ceiling) rates |
|---|---|---|---|---|---|---|
| 1 | **F(6) - Motor operated chaff cutter with safety cover** | **F(6)1N- <3HP Motor Operated** | M/s. Sri Sai Agritech | Agricare **2 HP** | 32,500 | 29,000 |
| 2 | | **F(6)4- 5HP Motor Operated** | | **Agricare Chaff Cutter** | 79,999 | 69,999 |
| 3 | **A(4) : Tractor drawn Rotovator** | **A(4)4 : 35 HP, 36 Blades, 140 cms Working Width** | M/s. John Deere India Pvt. Ltd., | **RT 6015** | **Model name to be read as RT 1015** | |

**Director of Agriculture**